ದಿನಾಂಕ 06-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಖ್ಯ ವಿಚಾರಣೆ:** ಫಿರ್ಯಾದಿ ಪರ ಶ್ರೀ ಡಿ ಎನ್ ಎನ್ ವಕೀಲರಿಂದಃ

7. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ.

8. ಆರೋಪಿ ನೀಡಿದ ಚೆಕ್‌ನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ.1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ಈಗಾಗಲೇ ನಿ.ಪಿ.1 ಎ ಎಂದು, ಕೆ.ಡಿ.ಸಿ.ಸಿ ಬ್ಯಾಂಕ್ ರವರು ನೀಡಿದ 4 ಮೆಮೊಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಈಗಾಗಲೇ ನಿ.ಪಿ.2 ರಿಂದ 5 ಎಂದು, ಆರೋಪಿಗೆ ನೀಡಿದ ನೋಟಿಸನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ಈಗಾಗಲೇ ನಿ.ಪಿ.6 ಎಂದು, refused ಎಂಬ ಹಿಂಬರಹ ದೊಂದಿಗೆ ವಾಪಸ್ಸು ಆದ RPAD ನೋಂದಾಯಿತ ಅಂಚೆ ಕವರ್ ನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ.7 ಎಂದು, ಅದಲ್ಲಿರುವ ನೋಟಿಸನ್ನು ಈಗಾಗಲೇ ನಿಪಿ-7 ಎ ಎಂದು, ಫಿರ್ಯಾದಿ ಸಂಸ್ಥೆಯ ಆಡಳಿತ ಮಂಡಳಿ ಹೊರಡಿಸಿದ ಠರಾವು ದಿನಾಂಕ 02-11-2019 ರ ನಕಲನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ.8 ಎಂದು, ಫಿರ್ಯಾದಿ ಸಂಸ್ಥೆಯ ಆಡಳಿತ ಮಂಡಳಿ ಹೊರಡಿಸಿದ ಠರಾವು ದಿನಾಂಕ 02-01-2023 ರ ನಕಲನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ.9 ಎಂದು, ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ.10 ಎಂದು, ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ-11 ಎಂದು, ಡಿಮಾಂಡ್ ಪ್ರಾಮಿಸರಿ ನೋಟ್‌ನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿಪಿ-12 ಎಂದು, ಭದ್ರತಾ ಪತ್ರವನ್ನು

ಹಾಜರುಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ -13 ಎಂದು, ಸಾಲದ ಖಾತೆಯ ಸ್ಟೇಟ್ ಮೆಂಟ್‌ನ್ನು ಹಾಜರು ಪಡಿಸಿದ್ದು, ಅದನ್ನು ಈಗಾಗಲೇ ನಿ.ಪಿ-14 ಎಂದು ಗುರುತಿಸಲಾಗಿದೆ. ಫಿರ್ಯಾದಿ ಸಂಸ್ಥೆಯ ಆಡಳಿತ ಮಂಡಳಿ ಹೊರಡಿಸಿದ ಠರಾವು ದಿನಾಂಕ 02-02-2024 ರ ಯಥಾ ನಕಲನ್ನು ಹಾಜರು ಪಡಿಸಿದ್ದು, ಅದನ್ನು ನಿ.ಪಿ.15 ಎಂದು ಗುರುತಿಸಲಾಗಿದೆ. .

**ಪಾಟೀ ಸವಾಲುಃ** ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.